


ಜೀವ ತಗೆವ ಶಾಪ ನಿಮಗೆ ತಟ್ಟದೇ ಇರಕಲಾ ಎಂದ ಸಣಕೂಸ ಒಳಗೆ ಹೋಗಿ ತೆಣೆ ಮೇಲೆ ಕೂತ. ಕುಶಲಕ್ಕ ತಡೆಯಲಾಗದೇ ಆ ಸೊಸೈಟಿ ಹತ್ರ ಹದಿನೈದು ಎಕರೆ ಆಗುವಷ್ಟು ಫಾರೆಸ್ಟ್ ಪಡ ಅತಿಕ್ರಮಣ ಮಾಡಿರಲ್ಲ ದೊಡ್ಡ ಒಡೆದಿರು ಅದಕ್ಕೇನ ಮಾಡ್ತೀರಿ. ನಮ್ಮ ಅರ್ಧ ಎಕರೆ ಬೇಕಾಗಿದೆಯಲ್ಲ ನಿಮ್ಮ ಅರಣ್ಯ ಇಲಾಖೆಗೆ ಎಂದು, 'ಹೇಳಿ' ಎಂದರೂ ಅರಣ್ಯ ಇಲಾಖೆಯವರು ಮಾತಾಡದೇ ಅಲ್ಲಿಂದ ಕಾಲು ಕೀಳುತ್ತಾರೆ. ಇಶ್ರಾ ಕಲಿತು ಮನೆಯಲ್ಲಿಯೇ ಕುಳಿತಿದ್ದ.

ಕಾತೂರಿನ ಪೋಸ್ಟ್ ಒಂದರಲ್ಲಿ ಕೆಲಸ ಮಾಡುತ್ತಿದ್ದ ವಿನಾಯಕ ರಜೆಗೆ ಹೋದಾಗಲೆಲ್ಲ ಅವನ ಕೆಲಸ ಮಾಡುತ್ತಿದ್ದ. ಅವನ ಜೊತೆಗೆ ಪತ್ರ ಕೊಡುವಲ್ಲೆಲ್ಲ ತಿರುಗಿ ರೂಢಿ ಮಾಡಿಕೊಂಡಿದ್ದ ವಿನಾಯಕನ ವಿಶ್ವಾಸವನ್ನು ಗೆದ್ದಿದ್ದ. ತನ್ನ ನಿವೃತ್ತಿಯ ನಂತರ ನಿನಗೆ ಕೊಡಿಸುತ್ತೇನೆ ಎಂದು ಭರವಸೆಯನ್ನು ಕೊಟ್ಟಿದ್ದ. ಆದರೆ ಅದು ಕೂಡ ಅವನಿಗೆ ಸಿಗದೇ ಮತ್ತೊಬ್ಬರ ಪಾಲಾಗಿರುವುದು ಇಡೀ ಮನೆಯೇ ಸೋಲಿನಲ್ಲಿ ಮುಳುಗಿದಂತಿತ್ತು. ಈ ಎಲ್ಲದರ ಮಧ್ಯೆ ಕೆಲ ದಿವಸದವರೆಗೂ ಅಬ್ಬಲಿ ಮುಂತಾದ ಹೂವಿನ ಗಿಡಗಳು, ಗೆಣಸು, ಬಸಲೆ ಬಳ್ಳಿಗಳಿಗೆ ನೀರು ಹಾಕದೇ ಕುಶಲಕ್ಕ ಯಾಕೋ ದೂರ ಸರಿದಂತೆ ಕಂಡಿತು. ಅವಳಿಗೆ ಆಗಾಗ ಹುಷಾರಿಲ್ಲದ ಕಾರಣ ಸಣಕೂಸ ಅವುಗಳಿಗೆ ನೀರು ಹಾಕುತ್ತಿದ್ದ. ಒಡತಿಯನ್ನು ಹಚ್ಚಿಕೊಂಡ ಗಿಡಗಳು ಸಣಕೂಸ ನೀರು ಹಾಕಿದರೂ ಹೂಗಳು ಬಿಡುತ್ತಿದ್ದರೂ ಕುಶಲಕ್ಕ ಎಲೆಗಳನ್ನು ಮುಟ್ಟದೇ, ಗಿಡಗಳನ್ನು ಹುರೈಸದೇ, ಹೂಗಳನ್ನು ಕೊಯ್ಯದೇ ಬಸಲೆ ಬಳ್ಳಿಗಳ ನೇವರಿಸದೇ ತಿಂಗಳಾಗುತ್ತಲೇ ಬಂತು. ಅಂಗಳದಲ್ಲಿ ಕುಳಿತು ಅಬ್ಬಲಿ ಹೂ ಕಟ್ಟುತ್ತಿದ್ದ ಆ ದಿನಗಳು ಎಲ್ಲಿ ಹೋದವು. ಬಂಡಿಹಬ್ಬ, ಸುಗ್ಗಿಹಬ್ಬ ಬಂತೆಂದರೆ ಸಕಲಬೇಣಕ್ಕೆ ಹೋಗಿ ಅಲ್ಲೇ ಮುನ್ನಾಲ್ಕು ದಿನ ಇರುವಷ್ಟು ತನ್ನ ಭಾವನ ಮಕ್ಕಳಿಗೆ ಬೇಕಾದ ಹೂವಿನ ಜಡೆಗಳು ಕುಶಲಕ್ಕನೇ ತಕ್ಕೊಂಡು ಹೋಗುವ ಹಬ್ಬದ ಸಂಭ್ರಮವೇ ಕಳೆದುಹೋಗಿತ್ತು. ದಿನಗಳು ಮರೆತೇ ಹೋಗುವಷ್ಟು ಅಂಗಳಕ್ಕೆ ಮರೆವಾಗಿದೆ. ಹಿತ್ತಲು ಬಡವಾಗಿದೆ.

ಬೇಸಿಗೆಯಲ್ಲಿ ವಾಟೆಹುಳಿ, ಮುರಗಲ ಹುಳಿ, ಕಾಳುಮೆಣಸು ಒಣಗಿಸಿಕೊಡುವ ಅಂಗಳ ಈಗ ಖಾಲಿ ಬಿದ್ದಿದೆ. ಸಣಕೂಸ ಕೂಡ ಬೆಟ್ಟಕ್ಕೆ ಹೋಗುವುದನ್ನೇ ಬಿಟ್ಟಿದ್ದಾನೆ. ತುಂಡು ಭೂಮಿ ಕುಶಲಕ್ಕನ ಹಿತ್ತಲ ಯೋಚನೆಯಲ್ಲೇ ಎತ್ತರದ ವಾಟೆ ಮರ ಹತ್ತುವ ಕೆಲಸ ಬಿಟ್ಟಿದ್ದ. ತನ್ನ ಮಗನಿಗಿಂತಲೂ ಹೆಚ್ಚು ಹಚ್ಚಿಕೊಂಡಿದ್ದ ಭೂಮಿ ಸಿಗುವುದು ಹಾಗಿರಲಿ. ಹಿತ್ತಲು ಅದರ ಬದಿಯಲ್ಲಿದ್ದ ತೆಂಗು ಅಡಕೆ ಗಿಡಗಳು ಇನ್ನುಮುಂದೆ ಕೈತಪ್ಪಿ ಹೋಗುತ್ತದೆಯಲ್ಲ ಎಂದು ನೋವಿನಿಂದ ಪರಿತಪಿಸುತ್ತಿದ್ದ. ಇಷ್ಟು ವರ್ಷ ಸುರಿಸಿದ ಬೆವರಿಗೆ ಅರ್ಥವೇ ಇರುವುದಿಲ್ಲವಲ್ಲ. ತೆಂಗಿನ ಮರಗಳ ತರ ನಾವು ತಬ್ಬಲಿಗಳೇ ಆಗುತ್ತೇವಲ್ಲ. ಇಲ್ಲಿಂದ ಬಿಟ್ಟು ಸಕಲಬೇಣಕ್ಕೆ ಹೋದರೆ ಅಣ್ಣಂದಿರು ಏನೆಂದಾರು ಅವರ ಜೀವನವೂ ಅಷ್ಟರಲ್ಲೇ ಇದೆ. ಈಗೊಮ್ಮೆ ಸಕಲಬೇಣಕ್ಕೆ ಹೋದಾಗ ನಾಗಪ್ಪನಲ್ಲಿ ಪರಿಸ್ಥಿತಿ ಹೇಳಿದಾಗ ಇಲ್ಲೆ ಬಂದುಬಿಡು ನನ್ನ ಜೊತೆ ಗಾವಡಿ ಕೆಲಸಕ್ಕೋದರಾಯ್ತು ಎಂದು ಸಮಾಧಾನಪಡಿಸಿದ್ದ. ಆದರೆ ಭೂಮಿಯ ಜೊತೆಗಿನ ಅತ್ಯಂತಿಕ ಸಂಬಂಧ ಬೇರೆಯದೇ ಆಗಿರುತ್ತದೆ. ಅದು ಎಲ್ಲ ಸಂಬಂಧಗಳನ್ನು ಮೀರಿದ್ದು. ಮನುಷ್ಯ ಸಂಬಂಧಗಳು ಹಳಸಿ ರಾಡಿಯಾಗಿ ಹೋಗುತ್ತವೆ. ಆದರೆ ಭೂಮಿಯ ಜೊತೆಗಿನ ಸಖ್ಯ ಪ್ರೀತಿ ಜೀವನದ ಕೊನೆವರೆಗೂ ಇರುತ್ತದೆ. ಸಣಕೂಸನಂತಹ ರೈತ ಜೀವಂತವಾಗಿರುವುದು ಭೂಮಿಯಲ್ಲಿ ಬಿದ್ದ ಬೆವರಿನ ಬಲದಿಂದಲೇ. ಆದ್ದರಿಂದಲೇ ಸಕಲಬೇಣದಲ್ಲಿ ಮನೆ ಕಟ್ಟಿಕೊಡುತ್ತೇನೆಂದು ಹೇಳಿದರೂ ಸಣಕೂಸ ಅಲ್ಲಿಗೆ ಹೋಗಲಾರ. ಕಾಡಿನ ಜೊತೆಗೆ ಸೊಪ್ಪು ಸದೆಗಳ ಜೊತೆಗೆ ಇರುವ ಅವಿನಾಭಾವ ಸಂಬಂಧ ಅಂತಹದು ಎಂಬುದು ಅವನಿಗೇನು ಗೊತ್ತು? ಕೊಟ್ಟಿಗೆ, ಮನೆ ಬಿಟ್ಟು ದನಕರುಗಳನ್ನು ಹೊಡೆದುಕೊಂಡು ಹೋಗುವ ಕಷ್ಟ ಅವುಗಳನ್ನು ಇನ್ಯಾರಿಗೋ ಮಾರಲು ಆಗದ ಕಷ್ಟ ಎಂತಹ ಫಜೀತಿಯನ್ನು ತಂದಿಟ್ಟಿತ್ತು. ಅವನ ನೋವು ಅರ್ಥವಾದರೂ ಅದನ್ನು ವ್ಯಕ್ತಪಡಿಸಲಾರದ ಕುಶಲಕ್ಕನ ಮನಸ್ಸನ್ನು ವ್ಯಗ್ರವಾಗಿಸಿದ ಮಗನನ್ನು ಕೆಲಸಕ್ಕೆ ಕಳಿಸುವ ಕಷ್ಟವೂ ಅಷ್ಟೇ ಘೋರವಾದುದು ಅವಳಿಗೆ.

ಹೀಗೆ ದಿನ ದೂಡುತ್ತಿರುವಾಗಲೇ ಕುಶಲಕ್ಕ ಯಾಕೋ ಸ್ತಬ್ಧವಾದಂತೆ ಸಣಕೂಸನಿಗೆ ಕಂಡಳು. ಹಿತ್ತಲ ಅಂಗಳದಲ್ಲಿ ಯಾವಾಗಲೂ ಕುಳ್ಳುವ ಅವಳು ಈಗ ದಿವಸಕ್ಕೆ ಒಮ್ಮೆಯೂ ಹೋಗುತ್ತಿರಲಿಲ್ಲ. ಮನೆಯಲ್ಲೇ ತಿರುಗುತ್ತ ಅಡುಗೆ ಮಾಡದಂಗೆ ಮಾಡುತ್ತ ಇದ್ದು ಇಲ್ಲದಂತೆ ಕಂಡಳು. ಬಸಲೆ ಚಪ್ಪರವನ್ನು ದಾಟಿ ಬರುವ ಬಸಲೆಯನ್ನು ತುಂಡು ಮಾಡಿ ಶೆಟ್ಲಿಯ ಬೆರಕೆಯ ಹಾಕಿ ಕಮ್ಮಗಿನ ಸಾರು ಮಾಡುವ ಕುಶಲಕ್ಕ ಈಗ ಅಲ್ಲಿಗೆ ಬರಲೇ ಇಲ್ಲ. ಬಸಲೆ ಬಳ್ಳಿಗಳು ವಾಲುತ್ತಿದ್ದವು. ಕೊಟ್ಟಿಗೆಯಲ್ಲಿ 'ಹುಂಡಿ' ಕರುವಿಗೆ ಹಾಲು ಕುಡಿಸಲು 'ಅಂಬಾ' ಎಂದು ಕುಶಲಕ್ಕನನ್ನು ಕರೆದರೂ ಕೇಳುತ್ತಿರಲಿಲ್ಲ. ಸಣಕೂಸನೇ ಕರುವನ್ನು ಬಿಡುತ್ತಿದ್ದ. ದನಗಳಿಗೆ ಹುಲ್ಲು ಕೊಯ್ಯುವ, ಹುಲ್ಲು ಹಾಕುವ, ದನ ಬಿಡುವ, ಕಟ್ಟುವ ಪ್ರಜ್ಞೆಯೇ ಇಲ್ಲ. ಇದರ ನಂತರ ಮನೆಯ 'ಕಂಬಳ'ಕ್ಕೆ ಆಚೀಚೆ ಮನೆಯವರೆಲ್ಲ ಒಬ್ಬೊಬ್ಬರಂತೆ ಮನೆ ಹುಲ್ಲು ಹೊದಿಸಲು ಬಂದು ಮನೆಯೊಳಗಿನ ವಸ್ತುಗಳನ್ನೆಲ್ಲ ಇಶ್ರಾ ಸಣಕೂಸನೇ ಇಡುತ್ತಿದ್ದರು. ಹೊದಿಕೆ ಮುಗಿದ ಮೇಲೆ ಸಣಕೂಸನೇ ಕೇವಲ ಅನ್ನಸಾರು ಮಾಡಿ ಬಡಿಸಬೇಕಾಯಿತು. ಕುಶಲಕ್ಕ ಏಳುವುದಿಲ್ಲ. ಎದ್ದರೆ ಕುಳ್ಳುವುದಿಲ್ಲ ಎನ್ನುವಂತಾದಳು. ಬಂದ ಜನಕ್ಕೆ ಕುಶಲಕ್ಕನಿಗೆ ಏನಾಗಿದೆ ಎಂಬುದು ಅರ್ಥವಾಗದೇ ಹೋಯಿತು. ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಡಾಕ್ಟ್ರು ಔಷಧಿ ಕೊಟ್ಟು ಅವಳನ್ನು ಒಂದಿಷ್ಟು ದಿನ ಪ್ರೀತಿಯಿಂದ ನೋಡಿಕೊಳ್ಳಿ ಎಂದಷ್ಟೇ ಹೇಳಿದರು.

ಕುಶಲಕ್ಕ ಹಿತ್ತಿಲಿನಲ್ಲಿ ಇದ್ದ ಒನಕೆ ಹಿಡಿಯುತ್ತಾಳೆ, ಕಣ್ಣೀರು ಹಾಕುತ್ತಾಳೆ. ಹಾಗೇ ಒಮ್ಮೆ ಹಿತ್ತಲಿನ ಗಿಡಗಳನ್ನು ದಿಟ್ಟಿಸುತ್ತಾಳೆ. ಅವೆಲ್ಲ ಒಣಗಿದಂತೆ ಭಾಸವಾಗುತ್ತದೆ. ಗಿಡಗಳನ್ನು ಬೆಳೆಸಿದ ಒಡತಿ ಹತ್ತಿರ ಇಲ್ಲದಿರುವುದರಿಂದ ಸುಳಿದಾಡುತ್ತಿಲ್ಲದ್ದರಿಂದ ಗಿಡಗಳು ಒಣಗುವುದಕ್ಕೆ ಶುರು ಮಾಡಿದವು. ಇಶ್ರಾ ಸಣಕೂಸ ಹಾಕಿದ ನೀರು ತಾಗಲೇ ಇಲ್ಲ, ಕುಶಲಕ್ಕಳಿಗೆ ಡಾಕ್ಟ್ರು ಕೊಟ್ಟ ಔಷಧಿಯಂತೆ. ಬಸಲೆ ಚಪ್ಪರವೇ ಅತ್ತಂತೆ ಕಾಣುತ್ತಿತ್ತು. ಅಬ್ಬಲಿ ಹೂಗಳು ರಾತ್ರಿಯಾದರೂ ಅರಳಿಯೇ ಇದ್ದವು, ಮಾಲೆ ಕಟ್ಟಬಹುದೆಂದು. ಅವಳೇ ನೆಟ್ಟ ಗೆಣಸು ಅಗೆಯಬಹುದೆಂದು ಕಾದಿದ್ದವು. ಕುಶಲಕ್ಕ ಎಚ್ಚೆತ್ತುಕೊಳ್ಳಲೇ ಇಲ್ಲ.

ಇದಾದ ಒಂದು ದಿವಸದ ಮೇಲೆ ಕುಶಲಕ್ಕ ಹಿತ್ತಲಿನ ಅಂಗಳಕ್ಕೆ ತಲೆ ಕೊಟ್ಟು ಮಲಗಲು ಶುರುಮಾಡಿದಳು. ಅವಳ ಸ್ಥಿತಿಯನ್ನು ನೋಡಿ ರಜೆ ಮಾಡಿ ಬಂದ ಆಲು ಇಶ್ರಾ ಅಂಗಳದಲ್ಲಿ ಕುಳಿತುಕೊಳ್ಳುತ್ತಿದ್ದರು. ಸಣಕೂಸನ ಕಣ್ಣಲ್ಲಿ ನೀರು ತುಂಬಿದ್ದರೂ ಅಲ್ಲಿಯೇ ಆವಿಯಾಗಿ ದುಃಖವನ್ನು ವ್ಯಕ್ತಪಡಿಸಲಾರದಷ್ಟು ನೊಂದು ಹೋಗಿದ್ದ. ಕುಶಲಕ್ಕ ಊಟ ಬಿಟ್ಟ ಸುದ್ದಿ ಕೇಳಿ ಊರಿನ ಹೆಂಗಸರು ಬಂದು ಮಾತಾಡಿಸಲು ಪ್ರಯತ್ನಿಸಿದರು. ಅವಳಿಗೆ ಮಾತ್ರ ಇವರೆಲ್ಲ ಯಾಕೆ ಬಂದಿದ್ದಾರೆ ಎಂದು ಗ್ರಹಿಸಲು ಆಗಲೇ ಇಲ್ಲ. ರಾತ್ರಿಯೂ ಕೂಡ ಹಿತ್ತಲ ಅಂಗಳದಲ್ಲಿಯೇ ಮಲಗುತ್ತೇನೆ ಎಂದು ಹಟ ಮಾಡಿದಳು. ಚಿಮಣಿಯೊಂದು ಅವಳ ಹತ್ತಿರ ಸಣ್ಣಕೆ ಉರಿಯುತ್ತಲೇ ಇತ್ತು. ಅದು ಕೂಡ ಎಣ್ಣೆ ಕಡಿಮೆಯಾಗಿ ಈಗಲೋ ಆಗಲೋ ಎನ್ನುವಂತಿತ್ತು. ಮತ್ತೆ ಮತ್ತೆ ಬೀಸುವ ಗಾಳಿಗೆ ಹೊಯ್ದಾಡುತ್ತಿತ್ತು. ಆಲೂ ಇಶ್ರಾ ಸಣಕೂಸ ಅಂಗಳದ ಮೂಲೆಯಲ್ಲಿ ಒಂದು ಕಡೆ ಎಚ್ಚರವಾಗಿಯೇ ಮಲಗಿದ್ದರು. ಚಿಮಣಿಯ ಬೆಳಕು ಅಂಗಳದಾಚೆಗಿನ ಹೂ ಗಿಡಗಳ ಜೊತೆಗೆ ನೆಳಲು ಬೆಳಕಿನಾಟವನ್ನು ನಡೆಸುತ್ತಿದ್ದಂತಿತ್ತು. ಮೇಲೆ ಆಕಾಶದಲ್ಲಿ ರಾಶಿ ರಾಶಿ ಇರುವ ನಕ್ಷತ್ರಗಳು ಒಂದೂ ಕಾಣಿಸದೇ ಕಪ್ಪು ಮೋಡಗಳೇ ತುಂಬಿದಂತೆ ಅವು ಕೂಡ ವಿಚಿತ್ರ ವಿಚಿತ್ರ ಆಕಾರ ಪಡೆದು ಕುಶಲಕ್ಕನನ್ನೇ ತದೇಕಚಿತ್ತದಿಂದ ನೋಡಿದಂತಿತ್ತು.

ಕುಶಲಕ್ಕಳಿಗೆ ಮೊನ್ನೆ ಲಿಂಬು ಗಿಡದ ಹತ್ತಿರ ಕಂಡ ಆಕೃತಿ ಮತ್ತೆ ಅವಳೆದುರು ಬಂದಂತಾಗಿ ಅದೇ ಆಕೃತಿ ಅವಳ ಮೈಯನ್ನು ಹಾದು ಜಾದು ಮಾಡಿದಂತೆ ಮೇಲಕ್ಕೆಳೆದುಕೊಂಡು ಹೋಗುತ್ತಲೇ ಇದ್ದಂತೆ ಅಲ್ಲೆ ಆಚೆ ಪಕ್ಕದಲ್ಲೇ ಮಲಗಿದ್ದ ಆಲು ಕನಸಿನಲ್ಲಿ ಅದೇ ಆಕೃತಿ ವಿಮಾನದಂತೆ ಭಾಸವಾಗಿ ಅದು ಹಿತ್ತಲಿನಲ್ಲಿಯೇ ಬಿದ್ದಂತಾಗಿ ಬೆಚ್ಚಿ ಬೀಳುತ್ತಾನೆ. ತಾನೇನು ಕಂಡಿದ್ದಾನೆಂದು ಅರ್ಥವಾಗದಂತೆ ತಟಕ್ಕನೇ ಎದ್ದವನು ಶವದಂತೆ ಮಲಗಿದ್ದ ಕುಶಲಕ್ಕನನ್ನು ನೋಡಿ ಮತ್ತೆ ಕುಸಿಯುತ್ತಾನೆ. ನೋಡ ನೋಡುತ್ತಿದ್ದಂತೆ ಹೊಯ್ದಾಡುತ್ತಿದ್ದ ಚಿಮಣಿ ಬುಡ್ಡಿ ಎಣ್ಣೆ ಖಾಲಿಯಾಗಿ ಕೊನೆಗೊಮ್ಮೆ ದೊಡ್ಡಕ್ಕೆ ಉರಿದು ನಂದೇ ಹೋಯಿತು.

ಪ್ರತಿಕ್ರಿಯಿಸಿ: feedback@sudha.co.in